ಒ.ಎಸ್. ನಂ. 48/2022

ಪಿ .ಡಬ್ಲ್ಯೂ-1

(ಇಂದು ದಿನಾಂಕ 15/09/2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.)

**ಮುಂದುವರೆದ ಪಾಟೀ ಸವಾಲುಃ 1 ರಿಂದ 3, 5 ಮತ್ತು 6 ನೇ ಪ್ರತಿವಾದಿಯರ ಪರವಾಗಿ ಶ್ರೀ ಆರ್.ಆರ್.ಎಚ್. ವಕೀಲರಿಂದ.**

ದಿನಾಂಕಃ 21/03/1996 ರ ಪಾಲು ವಿಭಾಗವನ್ನು ಪ್ರಶ್ನಿಸಿರುವದಿಲ್ಲ. ನಾನು ಈ ದಾವೆಯಲ್ಲಿ ವಿಭಾಗ ಪತ್ರವನ್ನು ಹಾಜರುಪಡಿಸಿದ್ದೇನೆ. ಆ ರೀತಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ದಿನಾಂಕಃ 21/03/1996 ರ ವಿಭಾಗದಲ್ಲಿ ನನಗೆ ವಿಭಾಗ ಕೊಟ್ಟಿರುವದಿಲ್ಲ ಮತ್ತು ನಗದು ರೂಪದಲ್ಲಿಯೂ ಸಹ ನನಗೆ ಭಾಗ ಕೊಟ್ಟಿರುವದಿಲ್ಲ . ವಿಭಾಗ ಪತ್ರದಲ್ಲಿ ದಿನಾಂಕಃ 21/03/1996 ರಂದು ವಿಭಾಗ ಪತ್ರದಲ್ಲಿ ನನ್ನ ಹಿಸ್ಸೆಯ ಬದಲಾಗಿ ರೂ.50 ಸಾವಿರ ನಗದು ಪಡೆದುಕೊಂಡು ನನ್ನ ಹಕ್ಕನ್ನು ಬಿಟ್ಟು ಕೊಟ್ಟಿದ್ದೇನೆ ಎಂದು ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ಬರೆಸಿದ್ದೇನೆ ಎಂದರೆ ಸರಿ . 2016 ರಿಂದ ನಾನು ಕುಟುಂಬದ ಮೂಲ ಮನೆಯಲ್ಲಿ ಬಂದು ಉಳಿದುಕೊಂಡಿದ್ದೇನೆ . . ವಿಭಾಗದ ನಂತರ ನನ್ನ ತಂದೆ ಮತ್ತು ತಾಯಿಯವ 2 ನೇ ಪ್ರತಿವಾದಿಯ ಜೊತೆಗೆ ವಾಸವಾಗಿದ್ದರು. ನಾನು 2016 ರಲ್ಲಿ ಮರಳಿ ಮನೆಗೆ ಬಂದ ನಂತರ ನನ್ನ ತಂದೆ ತಾಯಿಯ ಜೊತೆಗೆ ವಾಸವಾಗಿದ್ದೇನೆ. ನನ್ನ ತಂತೆ ತಾಯಿಗೆ ಮೃತಪಡುವದಕ್ಕಿಂತ ಮೊದಲು ಯಾವದೇ

ರೀತಿಯ ಅನಾರೋಗ್ಯ ಇರಲಿಲ್ಲ . ನನ್ನ ತಂದೆ ಮೃತಪಡುವ 3 ವರ್ಷದ ಮೊದಲಿನಿಂದಲೂ ಹಾಸಿಗೆ ಹಿಡಿದಿದ್ದರು ಎನ್ನುವದು ಸರಿಯಲ್ಲ . ನಮ್ಮ ತಂದೆಗೆ ಸಿದ್ದಾಪುರದ ಓಂಕಾಲ ಕ್ಲಿನಿಕ, ಶಿರಸಿಯ ಶ್ರೀಪಾದ ಹೆಗಡೆ ಕ್ಲಿನಿಕ್ ಮತ್ತು ಧಾರವಾಡದ ಎಸ್.ಡಿ.ಎಮ್. ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿದ್ದಾರೆ ಎಂದರೆ ಸಾಕ್ಷಿ ನಾನು ಸಹ ಹೋಗಿದ್ದೇನೆ. ನಮ್ಮ ತಂದೆಗೆ ನಿರಂತರವಾಗಿ ಚಿಕಿತ್ಸೆ ಕೊಡಿಸುವ ಅಗತ್ಯ ಇತ್ತು ಎನ್ನುವದು ಸರಿಯಲ್ಲ. ನಾನು ವೈಯ್ಯಕ್ತಿಕವಾಗಿ ನಮ್ಮ ತಂದೆಗೆ ಚಿಕಿತ್ಸೆ ಕೊಡಿಸಲು ಕರೆದು ಕೊಂಡು ಹೋಗಿರುವದಿಲ್ಲ. ನಮ್ಮ ತಂದೆ ತಾಯಿ ಅನಾರೋಗ್ಯವಾಗಿದ್ದರಿಂದ ದಿನಾಂಕಃ 25/04/2013 ರಂದು 2 ನೇ ಪ್ರತಿವಾದಿಗೆ ದಾವಾ ಆಸ್ತಿಗಳ ವ್ಯವಹಾರ ನೋಡಿಕೊಳ್ಳಲು ಅಧಿಕಾರ ಪತ್ರ ಬರೆದುಕೊಟ್ಟಿದ್ದರು ಎಂದರೆ ಸರಿ. ನಮ್ಮ ತಾಯಿ 2020 ರಲ್ಲಿ ಅಧಿಕಾರ ಪತ್ರ ಬರೆದುಕೊಟ್ಟಿದ್ದಾರೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ ಬಗ್ಗೆ ನನಗೆ ನೆನಪಿರುವದಿಲ್ಲ. ನಮ್ಮ ತಾಯಿಗೆ ಅಧಿಕಾರ ಪತ್ರ ಬರೆದುಕೊಡುವ ಬಗ್ಗೆ ಅವಶ್ಯಕತೆ ಇತ್ತು ಎನ್ನುವ ಬಗ್ಗೆ ನಾನು ದಾವೆಯಲ್ಲಿ ಹೇಳಿ ಬರೆಸಿರುವದಿಲ್ಲ . ನಮ್ಮ ತಂದೆ ಮನೆಯಲ್ಲಿ ಮೃತಪಟ್ಟಿದ್ದಾರೆ. ನಮ್ಮ ತಂದೆಯ ಮರಣ ಪ್ರಮಾಣಪತ್ರವನ್ನು 1 ನೇ ಪ್ರತಿವಾದಿ ಮಾಡಿಸಿದ್ದಾರೆ. ನನಗೆ ಅನಾರಗೋಗ್ಯವಾಗಿದ್ದರಿಂದ ನಾನು ನಮ್ಮ ತಂದೆಯ ಮರಣ ಪ್ರಮಾಣಪತ್ರ ಮಾಡಿಸಿರುವದಿಲ್ಲ . ನಮ್ಮ ತಂದೆ 1 ನೇ ಪ್ರತಿವಾದಿಯ ಜೊತೆ ವಾಸವಾಗಿರುವದರಿಂದ ಅವರಿಗೆ ಸಂಬಂದಪಟ್ಟ ದಾಖಲೆಗಳನ್ನು ಕೊಟ್ಟು 1 ನೇ ಪ್ರತಿವಾದಿ

ನಮ್ಮ ತಂದೆಯ ಮರಣ ಪ್ರಮಾಣಪತ್ರ ಮಾಡಿಸಿದ್ದಾರೆ ಎನ್ನುವದು ಸರಿಯಲ್ಲ . ನಮ್ಮ ತಂದೆಯ ಮರಣ ಪ್ರಮಾಣಪತ್ರವನ್ನು ಹಾಜರುಪಡಿಸಿದ್ದೇನೆ ಅಥವಾ ಇಲ್ಲ ಎಂದು ನನಗೆ ನೆನಪಿಲ್ಲ.

ನಿಶಾನೆ ಪಿ 11 ಮರಣ ಶಾಸನವನ್ನು ನಮ್ಮ ತಾಯಿ ನನಗೆ 2021ರಲ್ಲಿ ಕೊಟ್ಟಿದ್ದಾರೆ. ಮರಣ ಶಾಸನವನ್ನು ಯಾವಾಗ ಎಲ್ಲಿ ಮಾಡಿದ್ದಾರೆ ಎನ್ನುವ ಬಗ್ಗೆ ನನಗೆ ಗೊತ್ತಿಲ್ಲ. ನಮ್ಮ ತಂದೆ ಮರಣ ಶಾಸನ ಬರೆಸಿದ್ದೇನೆ ಎಂದು ನನಗೆ ತಿಳಿಸಿರುವದಿಲ್ಲ. ನಾನು ಮರಣ ಶಾಸನವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು ಹೊರತುಪಡಿಸಿ ಬೇರೆ ಎಲ್ಲಿಯೂ ಹಾಜರು ಪಡಿಸಿರುವದಿಲ್ಲ. ಮರಣ ಶಾಸನದ ಅನುಪ್ರಮಾಣಿತ ಸಾಕ್ಷಿದಾರರ ಪರಿಚಯವಿದೆ. ವಸಂತ ಹೆಗಡೆಯವರು ನಮ್ಮ ಸಂಬಂಧಿಕರು . ಆರ್. ವಿ. ಕಾಮತ ಎನ್ನುವವರು ನನಗೆ ಮರಣ ಶಾಸನಕ್ಕೆ ಸಾಕ್ಷಿ ಹಾಕಿದ ನಂತರ ಪರಿಚಯಸ್ಥರಾಗಿದ್ದಾರೆ . ನನಗೆ ಕುಟುಂಬದ ಆಸ್ತಿಗಳಲ್ಲಿ ಪಾಲು ಬೇಕು ಎಂದು ನಿಪಿ 11 ಮರಣ ಶಾಸನವನ್ನು ಸೃಷ್ಟಿ ಮಾಡಿದ್ದೇನೆ ಎನ್ನುವದು ಸರಿಯಲ್ಲ. ನನಗೆ ನಮ್ಮ ತಂದೆ ಮತ್ತು ತಾಯಿ ಆಸ್ತಿ ಕೊಡದಿದ್ದರೆ ನನಗೆ ದಾವಾ ಆಸ್ತಿಗಳಲ್ಲಿ ವಿಭಾಗ ಕೇಳುವ ಕಾನೂನುಬದ್ಧ ಹಕ್ಕು ಇರುವದಿಲ್ಲ ಎಂದರೆ ಸರಿ. ಆದ್ದರಿಂದ ನಾನು ನಿಪಿ 11 ಮರಣ ಶಾಸನವನ್ನು ಸೃಷ್ಟಿ ಮಾಡಿದ್ದೇನೆ ಎನ್ನುವದು ಸರಿಯಲ್ಲ. ನಿಪಿ11ರ ಬಾಂಡ ಪೇಪರನ್ನು ಎಲ್ಲಿ ತಂದಿದ್ದಾರೆ ಮತ್ತು ಸದರಿ ದಾಖಲೆಯನ್ನು ಎಲ್ಲಿ ಬರೆದಿದ್ದಾರೆ ಎಂದು ನನಗೆ ಮಾಹಿತಿ ಇರುವದಿಲ್ಲ. ನಿಪಿ11 ಮರಣ ಶಾಸನವನ್ನು

ಒ.ಎಸ್. ನಂ. 48/2022
ಪಿ .ಡಬ್ಲ್ಯೂ-1

ನಮ್ಮ ತಂದೆ ಬರೆದುಕೊಟ್ಟಿದ್ದಾರೆ . ನಮ್ಮ ತಾಯಿಗೆ ನ್ಯಾಯಾಲಯಕ್ಕೆ ಬಂದು ಮರಣ ಶಾಸನ ಕೊಟ್ಟ ಬಗ್ಗೆ ನ್ಯಾಯಾಲಯಕ್ಕೆ ಬಂದು ಸಾಕ್ಷಿ ಹೇಳಲು ಸಮರ್ಥರಾಗಿರುವದಿಲ್ಲ . ನಮ್ಮ ತಾಯಿಗೆ ಅನಾರೋಗ್ಯವಾಗಿದ್ದರಿಂದ ಅವರ ಮಾನಸಿಕ ಸ್ಥಿತಿ ಸರಿಯಾಗಿರುವದಿಲ್ಲ. ದಾವಾ ಆಸ್ತಿಗಳನ್ನು ಪ್ರತಿವಾದಿಯರು ಸಾಗುವಳಿ ಮಾಡುತ್ತಾರೆ ಎನ್ನುವದು ಸರಿಯಲ್ಲ . ದಾವಾ ಆಸ್ತಿಗಳನ್ನು ಪ್ರತಿವಾದಿಯರ ಜೊತೆಗೆ ಜಂಟಿಯಾಗಿ ಸಾಗುವಳಿ ಮಾಡುತ್ತೇನೆ ಎಂಬ ಬಗ್ಗೆ ದಾಖಲೆ ಇರುವದಿಲ್ಲ. ನನ್ನ ತಾಯಿ ನನ್ನ ಜೊತೆಗೆ ವಾಸವಾಗಿದ್ದಾರೆ ಎಂದು ತೋರಿಸಲು ಯಾವದೇ ದಾಖಲೆ ಹಾಜರುಪಡಿಸಿರುವದಿಲ್ಲ . ಪ್ರತಿವಾದಿಯರು ನನ್ನ ಗಮನಕ್ಕೆ ಬರದಂತೆ ಪಂಚರ ಮೂಲಕ ದಾವಾ ಆಸ್ತಿ ದಾಖಲೆಗಳಲ್ಲಿ ಹೆಸರು ನಮೂದಿಸಿಕೊಂಡಿದ್ದಾರೆಂದು ಯಾವದೇ ಕಾನೂನು ಕ್ರಮ ಜರುಗಿಸಿರುವದಿಲ್ಲ . ಪ್ರತಿವಾದಿಯರ ವಿಭಾಗಕ್ಕೆ ಬಂದ ಆಸ್ತಿಗಳನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ದಾಖಲೆಯನ್ನು ಸೃಷ್ಟಿಸಿ ಸುಳ್ಳು ದಾವಾ ಸಲ್ಲಿಸಿದ್ದೇನೆ ಎನ್ನುವದು ಸರಿಯಲ್ಲ . ದಿನಾಂಕಃ ಫೆಬ್ರವರಿ 2022ರ ಎರಡನೇ ವಾರದಲ್ಲಿ ದಾವೆಗೆ ವ್ಯಾಜ್ಯ ಉಂಟಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ನಿಪಿ11ರಲ್ಲಿ ಕಾಣಿಸಿದ ಸಾಕ್ಷಿದಾರರಿಗೆ ನಮ್ಮ ತಂದೆಯವರಿಗೆ ಯಾವದೇ ಪರಿಚಯವಿರುವದಿಲ್ಲ ಎನ್ನುವದು ಸರಿಯಲ್ಲ . ದಾವೆಯಲ್ಲಿ ಕೇಳಿದ ಯಾವದೇ ಪರಿಹಾರ ಪಡೆಯಲು ಅರ್ಹನಾಗಿರುವದಿಲ್ಲ ಎನ್ನುವದು ಸರಿಯಲ್ಲ.

ಒ.ಎಸ್. ನಂ. 48/2022

ಪಿ .ಡಬ್ಲ್ಯೂ-1

**4 ಮತ್ತು 8 ನೇ ಪ್ರತಿವಾದಿ ಮತ್ತು ಪ್ರತಿವಾದಿ ಪರ ವಕೀಲರನ್ನು ಕೂಗಿಸಲಾಗಿ ಗೈರು ಹಾಜರಾಗಿರುವದರಿಂದ ಪಾಟೀ ಸವಾಲು ಏನು ಇರುವದಿಲ್ಲ ಎಂದು ತೆಗೆದುಕೊಳ್ಳಲಾಯಿತು.**

**<u>ಮರುವಿಚಾರಣೆ ಇರುವದಿಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಸಹಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು, ಶಿರಸಿ.

(ಪೀಠಾಸೀನ ಸಿದ್ದಾಪುರ)